The Average Number of Hospitals and Dispensaries per one Lakh Population in each of the Divisions of the State.

*Q.—17. Sri NEELAKANTAPPA SHARNAPPA (Jewargi) —

Will the Government be pleased to state:—

(*a*) the average number of Dispensaries and Hospitals per one lakh population in each of the Divisions of the Mysore State;

(*b*) whether it is not a fact that Gulbarga Division is very badly lacking in medical facilities;

(*c*) if so, the steps taken or proposed to be taken to improve the medical facilities during the Third Plan period in that area?

A.—Sri K. NAGAPPA ALVA (Minister for Health).—

(*a*) (i) Bangalore Division	...	4.20
(ii) Mysore Division	...	5.58
(iii) Belgaum Division	...	3.03
(iv) Gulbarga Division	...	2.38

(*b*) Yes, comparatively.

'(*c*) Nine Government of India type Primary Health Centres and Three Health Unit type Dispensaries have been sanctioned so far. Eight more Government of India type Primary Health Centres are expected to be opened. Health Unit Dispensaries will be sanctioned in blocks of 15,000 population still lacking allopathic aid, where the Taluk Boards come forward to establish and maintain them.

ಶ್ರೀಮತಿ ಬನವರಾಜೇಶ್ವರಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಇದುವರೆಗೆ ಭಾರತ ಸರ್ಕಾರದವರು ಸ್ಥಾಪಿಸುತ್ತಿರುವ ಮಾದರಿಯ ಮೂರು ಔಷಧಾಲಯಗಳನ್ನು ಮಂಜೂರು ಮಾಡಿದ್ದೀರೆಂದು ಹೇಳಿದ್ದೀರಿ, ಹಾಗಾದರೆ ನಮ್ಮ ಗುಲ್ಬರ್ಗ ಡಿವಿಜನ್ನಿನ ಮೂರು ಜಿಲ್ಲೆಗಳಲ್ಲಿ ಎಲ್ಲೆಲ್ಲ ಪ್ರೈಮರಿ ಹೆಲ್ತ್ ಸೆಂಟರುಗಳನ್ನು ಪ್ರಾರಂಭ ಮಾಡಿದ್ದೀರಿ?

ಶ್ರೀ ಕೆ. ನಾಗಪ್ಪ ಆಳ್ವ.—ಎಲ್ಲೆ ತೆಗೆದಿದ್ದೇವೆ ಎಂಬ ವಿಚಾರದಲ್ಲಿ ಈಗ ನನ್ನಲ್ಲಿ ಇಕ್ಷರ್ ಮೇಷನ್ ಇಲ್ಲ.

ಶ್ರೀಮತಿ ಬನವರಾಜೇಶ್ವರಿ.—ತಾಲ್ಲೂಕು ಮಂಡಲಿಗಳವರು ಆರೋಗ್ಯ ವಿಭಾಗದ ಔಷಧಾಲಯಗಳನ್ನು ಪ್ರಾರಂಭಿಸಲು ಹಾಗೂ ನಡೆಸಿಕೊಂಡು ಬರಲು ಮುಂದೆ ಬಂದಲ್ಲಿ ಅಲೋಪತಿಕ್ ವೈದ್ಯಕೀಯ ಸಹಾಯವಿಲ್ಲದೆ ಇರುವ 15,000 ಜನಸಂಖ್ಯೆಯುಳ್ಳ ಬ್ಲಾಕ್‌ಗಳಿಗೆ ಅಂಥಾ ಔಷಧಾಲಯಗಳನ್ನು ಮಂಜೂರು ಮಾಡಲಾಗುವುದು ಎಂದು ಹೇಳಿದ್ದೀರಿ, ಈ ಪ್ರಕಾರ ಈಗ ಕೊಟ್ಟಿರುವ ಪ್ರೈಮರಿ ಸೆಂಟರುಗಳಲ್ಲದೆ ಮತ್ತೆ ಎಷ್ಟು ಡಿಸ್‌ಪೆನ್ಸರಿಗಳನ್ನು ನಮ್ಮ ಗುಲ್ಬರ್ಗ ಡಿವಿಜನ್ನಿಗೆ ಕೊಡಬೇಕಾಗುತ್ತದೆ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಡಿವಿಜನ್ನಿಗೆ ಒಟ್ಟು 167 ಹೆಲ್ತ್ ಯೂನಿಟ್‌ಗಳನ್ನು ಕೊಡಬೇಕಾಗಿದೆ. ಆಪ್ಪೈಕಿ 15 ಸಾವಿರ ಜನಸಂಖ್ಯೆ ಇರತಕ್ಕಂಥ ಬ್ಲಾಕಿಗೆ ಒಂದೊಂದು ಹೆಲ್ತ್ ಯೂನಿಟ್‌ನಂತೆ ಈಗಾಗಲೇ ಅಲ್ಲಗೆ 56 ಹೆಲ್ತ್ ಯೂನಿಟ್‌ಗಳನ್ನು ಕೊಟ್ಟಿದೆ. ಇನ್ನು 111 ಹೆಲ್ತ್ ಯೂನಿಟ್‌ಗಳನ್ನು ಕೊಡಬೇಕಾಗಿದೆ. ಅದರ ಪೈಕಿ 50 ಯೂನಿಟ್‌ಗಳನ್ನು ವರ್ಷದ ವಾರ್ಷಿಕ ಯೋಜನೆಯಲ್ಲಿ ಕೊಡಲಾಗುತ್ತದೆ.

ಶ್ರೀಮತಿ ಬನವರಾಜೇಶ್ವರಿ.—ಭಾರತ ಸರ್ಕಾರದವರು ಸ್ಥಾಪಿಸುತ್ತಿರುವ ಮಾದರಿಯ ಹೆಚ್ಚಿನ ಎಂಟು ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಬಹುದೆಂದು ನಿರೀಕ್ಷಿಸಲಾಗಿದೆ ಎಂದು ಹೇಳಿದ್ದೀರಿ, ಅವುಗಳನ್ನು ತೆರೆಯಲು ಕೇಂದ್ರ ಸರ್ಕಾರದ ಮಂಜೂರಾತಿ ಬಂದಿಲ್ಲವೇ, ಅಥವಾ ಪಬ್ಲಿಕ್ ಕಾಂಟ್ರಿಬ್ಯೂಷನ್ ಬಂದಿಲ್ಲವೇ? ಯಾವ ನೆಲುವಾಗಿ ಅವುಗಳನ್ನು ತೆರೆಯದೆ ಇಲ್ಲಿಯವರೆಗೂ ತಟಸ್ಥವಾಗಿ ನಿಂತಿದೆ?